ಜಮಿನಿನ ಕಿಮ್ಮತ್ತನ್ನು ನಿರ್ಧರಿಸುವುದಕ್ಕೆ ನಿರ್ದಿಷ್ಟ ಮಾರ್ಗದರ್ಶನಗಳಿದ್ದು, ಅವುಗಳ ಆಧಾರದ ಮೇಲೆ ಬೆಲೆ ನಿಷ್ಕರ್ಷೆ ಮಾಡಿ ನೊಂದಣಿ ಶುಲ್ಕ ಆಕರಣೆ ಮಾಡುವುದರಿಂದಲೇ ಭ್ರಷ್ಟಾಚಾರಕ್ಕೆ ಎಡೆಯಾಗಿದೆ ಎಂದು ಹೇಳಲು ಬರುವುದಿಲ್ಲ.

ಆ) ಊರಿನ ಸಾಮಿಪ್ಯ ವರ್ಗೀಕರಣ, ಜಮಿನಿನ ಫಲವತ್ತತೆ, ನೀರಿನ ಸೌಲಭ್ಯದ ಆಧಾರದ ಮೇಲೆ ಕೃಷಿ ಭೂಮಿಯ ಬೆಲೆಯನ್ನು ಮತ್ತು ನಗರ ವ್ಯಾಪ್ತಿಯ ಜಮಿನಿನ ಬಗ್ಗೆ ಅವುಗಳು ಇರುವ ಸ್ಥಳ ದೊರೆಯುತ್ತಿರುವ ನಾಗೀಕ ಸೌಲಭ್ಯಗಳನ್ನು ಆಳತೆಗೋಲು ಮಾಡಿಕೊಂಡು ಬೆಲೆ ನಿರ್ಧರಿಸಲಾಗುವುದು.

ಇ) ರಾಜ್ಯದ ಎಲ್ಲಾ ಆಸ್ತಿಗಳ ಅಂದಾಜು ಮಾರುಕಟ್ಟೆ ಬೆಲೆಯನ್ನು ನಿಷ್ಕರ್ಷೆ ಮಾಡುವ ಸಲುವಾಗಿ ನಿಯಮಗಳ ಪ್ರಕಾರ ಮಾರ್ಕೆಟ್ ವ್ಯಾಲ್ಯೂ ಎಷ್ಟಿಮೇಟ್ ಕಮಿಟಿಗಳನ್ನು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿದೆ. ಈ ಸಮಿತಿಗಳಲ್ಲಿ ಸಂಬಂಧಪಟ್ಟ ತಹಸೀಲ್ದಾರ್ ಉಪ ನೋಂದಣಾಧಿಕಾರಿ, ಇಂಜನಿಯರ್, ಹಾಗೂ ಸರ್ವೇಯರ್, ಇವರುಗಳ ಇದ್ದು ಸದರಿ ಸಮಿತಿಗಳು ಸಧ್ಯದಲ್ಲಿಯೇ ಕಾರ್ಯ ಪ್ರವೃತ್ತವಾಗಲಿವೆ. ಆಗ ಭ್ರಷ್ಟಾಚಾರ ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಹತ್ತಿಯ ವರ್ಗೀಕರಣ ಯಂತ್ರಗಳು.

491 - ಶ್ರೀ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) ಹತ್ತಿಯ ಎಳೆಯನ್ನು ಅಳತೆ ಮಾಡಿ ಅದರ ಗುಣವನ್ನು ವರ್ಗೀಕರಿಸುವ ಯಂತ್ರಗಳನ್ನು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಖರೀದಿಸಿವೆಯೆ;

ಆ) ಖರೀದಿಸದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ಎಹ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : ಅ) ರಾಯಚೂರು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ (ನಿ) ರಾಯಚೂರು ಈ ಸಂಘವು ಮಾತ್ರ ಈ ಯಂತ್ರವನ್ನು ಖರೀದಿಸಿದ್ದು ಉಳಿದ ಸಂಘಗಳು ಖರೀದಿಸಿರುವುದಿಲ್ಲ.

ಆ) ಉಳಿದ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಈ ಯಂತ್ರವನ್ನು ಖರೀದಿಸದಿರಲು ಈ ಕೆಳಕಂಡ ಕಾರಣಗಳಿವೆ.

1) ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲದಿರುವುದರಿಂದ ;

2) ಸಂಘಗಳು ಸಂಸ್ಕರಣ ಘಟಕಗಳನ್ನು ಹೊಂದಿರದೇ ಇರುವುದರಿಂದ ;

3) ಹೆಚ್ಚಿನ ಸಂಘಗಳು ಹತ್ತಿ ಖರೀದಿಸುವ ಮತ್ತು ಮಾರಾಟ ಮಾಡುವ ವ್ಯವಹಾರವನ್ನು ಕೈಗೊಳ್ಳದೇ ಇರುವುದರಿಂದ ;

4) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಹಾಗೂ ಕೇಂದ್ರ ಸರ್ಕಾರದ ಜವಳಿ ನಿಗಮದವರ ಪರವಾಗಿ ಹತ್ತಿಯನ್ನು ಈ ಸಂಘದವರು ಕೊಂಡುಕೊಳ್ಳತ್ತಿರುವುದರಿಂದ.

ಕೋಲಾರ ಜಿಲ್ಲೆಯಲ್ಲಿ ಬರಗಾಲಕ್ಕೆ ಒಳಗಾದ ಪ್ರದೇಶಗಳು